ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಆನೇಕಲ್ ತಾಲ್ಲೂಕಿನಲ್ಲಿ 3,610 ಜನರು 3936-33 ಎಕರೆ ಸರ್ಕಾರಿ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ.

ಆ) ಸರ್ಕಾರಿ ಜಮೀನಿನ ಬಗರ್‌ಹುಕುಂ ವಿಸ್ತೀರ್ಣದ ಪೈಕಿ ಸ್ವಲ್ಪ ವಿಸ್ತೀರ್ಣವು ಹಸಿರುಪಟ್ಟಿಯಲ್ಲಿ ಬರುತ್ತದೆ.

ಇ) ರಾಜ್ಯದಲ್ಲಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕಾಗಿ, ಕರ್ನಾಟಕ ಭೂ ಕಂದಾಯ ಕಾಯಿದೆ 1964ಕ್ಕೆ ಕಲಂ 94(ಎ) ಅನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯಿದೆ, 1990ರಂತೆ ಸೇರಿಸಲಾಗಿದೆ. ಇಂತಹ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಕಾರ್ಯವಿಧಾನವನ್ನು ಸದ್ಯದಲ್ಲಿಯೇ ಹೊರಡಿಸಲಿರುವ ಮೇಲಿನ ತಿದ್ದುಪಡಿ ಕಾಯಿದೆಯನ್ವಯ ತಯಾರಿಸಿರುವ ನಿಯಾಮಾವಳಿಗನುಸಾರವಾಗಿ ಮಾಡಲಾಗುತ್ತದೆ.

ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮದ ಸರ್ಕಾರಿ ಜಮೀನಿನ ಒತ್ತುವರಿ.

1261 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಹಲಗೆವಡೇರಹಳ್ಳಿ ಗ್ರಾಮದ ಸರ್ಕಾರಿ ಓಣಿ ಖುಷ್ಕಿ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಸರ್ಕಾರಿ ಭೂಮಿಯನ್ನು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಒತ್ತುವರಿ ಮಾಡಿರುವ ಸರ್ಕಾರಿ ಓಣಿ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಗ್ರಾಮದ ಬಡ ಜನರಿಗೆ ಉಚಿತ ನಿವೇಶನಗಳ ಅನುಕೂಲಕ್ಕೆ ಉಪಯೋಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಬೆಂಗಳೂರು ದಕ್ಷಿಣತಾಲ್ಲೂಕು, ಕೆಂಗೇರಿ ಹೋಬಳಿ, ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಹಲಗೆವಡೇರಹಳ್ಳಿ ಗ್ರಾಮದಲ್ಲಿ ಸರ್ಕಾರಿ ಓಣಿಯ ವಿಸ್ತೀರ್ಣ 0-18 ಗುಂಟೆ ಆಗಿರುತ್ತದೆ.

ಆ) ಸದರಿ ಜಮೀನನ್ನು ಯಾರು ಅಕ್ಕಪಕ್ಕದ ಭೂ ಮಾಲೀಕರು ಒತ್ತುವರಿ ಮಾಡಿರುವುದಿಲ್ಲ.

ಇ) ಸದರಿ ಜಮೀನು ಸರ್ಕಾರಿ ಓಣಿ ಜಮೀನಾಗಿರುವುದರಿಂದ ಉಚಿತ ನಿವೇಶನ ಹಂಚಲು ಯೋಗ್ಯವಾಗಿದ್ದಲ್ಲಿ ಪರಿಶೀಲಿಸಿ ಅಗತ್ಯಕ್ರಮ ಜರುಗಿಸಲಾಗುವುದು.

ಕೋಲಾರ ಜಿಲ್ಲೆಯಲ್ಲಿ ಭೂ ಮಂಜೂರಾತಿಯ ನಿಯಮಗಳ ಉಲ್ಲಂಘನೆ.

1296 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಭೂ ಮಂಜೂರಾತಿಯ ಸಮಯದಲ್ಲಿ ಸರ್ಕಾರವು ಭೂ ಮಂಜೂರಾತಿಯ ನಿಯಮಗಳನ್ನು ಪಾಲಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಆ ಭೂ ಮಂಜಾರಾತಿಯ ನಿಯಮಗಳೇನು?

ಇ) *ಈ ಭೂ ಮಂಜಾರಾತಿಯ ನಿಯಮಗಳನ್ನು ಉಲ್ಲಂಘಿಸಿ ಒಂದೇ ಕುಟುಂಬದ ಮೂವರು ಸದಸ್ಯರಿಗೆ ಮಂಜೂರಾತಿಯನ್ನು ನೀಡಿರುವ ಪ್ರಕರಣವೇನಾದರೂ ಕೋಲಾರ ಜಿಲ್ಲೆಯಲ್ಲಿ ಪತ್ತೆಯಾಗಿದೆಯೇ?*

ಈ) *ಪತ್ತೆಯಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?*

ಉ) *ಈ ರೀತಿಯ ಪ್ರಕರಣಗಳು ಪತ್ತೆಯಾದಾಗ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತವೆ.?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ಕಂದಾಯ ಸಚಿವರು

ಅ) ಹೌದು

ಆ) 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳು

ಇ) ಹೌದು. ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಗೋಮಾಳ ಜಮೀನನ್ನು ಒಂದೇ ಕುಟುಂಬದ ಜನ ಸದಸ್ಯರಿಗೆ ಭೂ ಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ಮಂಜೂರು ಆಗುರುತ್ತದೆ.

ಈ) ಈ ಬಗ್ಗೆ ಜಿಲ್ಲಾಧಿಕಾರಿಗಳು ನಿಯಮಾನುಸಾರ ಮಂಜೂರಾತಿಯನ್ನು ರದ್ದುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ 3-11-90ರಲ್ಲಿ ಆದೇಶ ನೀಡಿರುತ್ತಾರೆ.

ಉ) ಮಂಜೂರಾತಿಯನ್ನು ವಜಾ ಮಾಡಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.

ಕೋಲಾರ ಜಿಲ್ಲೆಗೆ ಬರ ಪರಿಹಾರಕ್ಕಾಗಿ ಬಿಡುಗಡೆ ಮಾಡಿರುವ ಹಣ

1285 - ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಗೆ ಬರಪರಿಹಾರ ಕಾಮಗಾರಿಗಳಿಗಾಗಿ ಹಣವನ್ನು ಯಾವ ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗಿದೆ.*
(ತಾಲ್ಲೂಕು ವಿವರಗಳನ್ನು ನೀಡುವುದು)

ಆ) *ಈ ಹಣವನ್ನು ಬಿಡುಗಡೆ ಮಾಡುವಾಗ ಜನ ಸಂಖ್ಯೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗಿರುವುದು ನಿಜವೆ*

ಇ) *ಹಾಗಿದ್ದಲ್ಲಿ, ತೀವ್ರವಾಗಿ ಬರಗಾಲಕ್ಕೆ ಒಳಗಾದ ಪ್ರದೇಶಗಳ ಆಧಾರದ ಮೇಲೆ ಪರಿಹಾರದ ಹಣವನ್ನು ಬಿಡುಗಡೆ ಮಾಡುವ ಪದ್ಧತಿಯನ್ನು ಇನ್ನು ಮುಂದಿನ ದಿನಗಳಲ್ಲಿ ಅನುಸರಿಸಲು ಸರ್ಕಾರ ಕ್ರಮಕೈಗೊಳ್ಳುತ್ತದೆಯೇ*

ಈ) *ಇಲ್ಲದಿದ್ದಲ್ಲಿ, ಕಾರಣಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ಕಂದಾಯ ಸಚಿವರು

ಅ) ಋತುಮಾನ ಸ್ಥಿತಿಯನ್ನು ಆಧರಿಸಿ ಹಣವನ್ನು ಬಿಡುಗಡೆ ಮಾಡದೆ. ದಿ: 8-3-91ರವರೆಗೆ ತಾಲ್ಲೂಕುವಾರು ಬಿಡುಗಡೆ ಮಾಡಿರುವ ಹಣದ ವಿವರಗಳು ಈ ಕೆಳಕಂಡಂತಿವೆ.